ಸಿ.ಸಿ ನಂಬ್ರ: 852/2023
ಪಿ.ಡಬ್ಲ್ಯೂ : 1

ದಿನಾಂಕ: 08-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರಿದ ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್ ಕೆ ಎಮ್ ವಕೀಲರಿಂದ

1. ಶ್ರೀಕಾಂತ ಬಿಲ್ಲವರ ಮೇಲೆ 2 ಪ್ರಕರಣವನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಅದು ಬೇರೆ ಇದು ಬೇರೆ ಎಂದು ನುಡಿಯುತ್ತಾರೆ. ಶ್ರೀಕಾಂತ ಬಿಲ್ಲವರವರ ಸಾಲಕ್ಕೆ ಶೋಭಾ ಹಾಗೂ ಮೊಹಮ್ಮದ್ ಸಯ್ಯದ್ ರವರು ಜಾಮೀನುದಾರರು ಇರುತ್ತಾರೆ. ಶೋಭಾರವರ ಮೇಲೆ ಸಲ್ಲಿಸಿದ ಪ್ರಕರಣದ ನಂಬರ್ ನೆನಪಾಗುತ್ತಿಲ್ಲ. ಸಯ್ಯದ್ ರವರ ಮೇಲೆ ಸಲ್ಲಿಸಿದ ಪ್ರಕರಣ ಸಂಖ್ಯೆ 851/2020. ಆ ಮೂರು ಪ್ರಕರಣದ ಚೆಕ್ ನಲ್ಲಿ ಇರುವ ಕೈ ಬರಹ ಒಂದೇ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಯಾರದ್ದು ಎಂದು ಗೊತ್ತಿರುವುದಿಲ್ಲ. ಬರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ.

2. ಶ್ರೀಕಾಂತ ಬಿಲ್ಲವ ಮುಖ್ಯ ಸಾಲಗಾರರು ಇದ್ದು, ಶೋಭಾ ಹಾಗೂ ಸಯ್ಯದ್ ರವರು ಜಾಮೀನುದಾರರು ಎಂದರೆ ಸರಿ. ಈ ದೂರಿನಲ್ಲಿ ಉಳಿದ ಇಬ್ಬರ ವಿರುದ್ಧ ಪ್ರಕರಣ ಸಲ್ಲಿಸಿದ ಬಗ್ಗೆ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ದುರುದ್ದೇಶದಿಂದ ಬುದ್ಧಿಪೂರಕವಾಗಿ ಮುಚ್ಚಿಟ್ಟಿದ್ದೀರಾ ಎಂದರೆ ಸಾಕ್ಷಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಹಾಜರು ಪಡಿಸಿದ ದಾಖಲೆಗಳನ್ನು ಹೊರತು ಪಡಿಸಿ ಬೇರೆ ದಾಖಲೆಗಳನ್ನು ಹಾಜರು ಪಡಿಸಲು ಬಾಕಿ ಇರುವುದಿಲ್ಲ.

3. ಚೆಕ್ ನಲ್ಲಿ ತೋರಿಸಿರುವ ಮೊತ್ತ ನಮ್ಮ ಸಂಸ್ಥೆಗೆ ಬರಬೇಕು ಎಂದು ತೋರಿಸಲು ವ್ಯಾಪಾರಿ ಖಾತೆ ಲೆಡ್ಜರ್ ಎಕ್ಟ್ರಾಕ್ಟ್ ಇರುತ್ತದೆ. ಲೆಡ್ಜರ್ ನ್ನು ನಮ್ಮ ಸಿಬ್ಬಂದಿಯವರು ಬರೆಯುತ್ತಾರೆ. ಲೆಡ್ಜರ್ ಬುಕ್ ನಲ್ಲಿ ಆರೋಪಿತರ ಸಹಿ ಪಡೆಯುವುದಿಲ್ಲ. ಆರ್ಥಿಕ ಭದ್ರತೆ ಇದ್ದರೆ ಬಿಲ್ ಗೆ ಸಹಿಯನ್ನು ಪಡೆದುಕೊಳ್ಳುತ್ತೇವೆ. ಲೆಡ್ಜರ್ ಪುಸ್ತಕಕ್ಕೆ ಪಡೆದುಕೊಳ್ಳುವುದಿಲ್ಲ. ಈ ಪ್ರಕರಣದಲ್ಲಿ ಎಲ್ಲಾ ಬಿಲ್ಲುಗಳಲ್ಲಿ ಆರೋಪಿಗಳ ಸಹಿ ಇರುತ್ತದೆ. ಅವುಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ.

4. ನಮ್ಮ ಹತ್ತಿರ ಬ್ಲಾಂಕ್ ಚೆಕ್ ಪಡೆದುಕೊಂಡು ಎಲ್ಲಾ ಚೆಕ್‌ಗಳನ್ನು ದುರ್ಬಳಕೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ವ್ಯವಹಾರದ ಬಗ್ಗೆ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೆಕ್ ನಲ್ಲಿ ನಮೂದಿಸಿರುವ ಮೊತ್ತವನ್ನು ಆರೋಪಿತರು ಬದ್ದರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**